

# ಜೀವನ ಸತ್ಯಗಳು

ಗುರುಗಳ ಬಳಿ ಹತ್ತಾರು ಮಂದಿ ಶಿಷ್ಯಂದಿರು ಅಭ್ಯಾಸ ಮಾಡುತ್ತಿದ್ದರು. ಒಂದು ದಿನ ಗುರುಗಳಿಗೆ ಸಂದೇಹ ಬಂತು, ತಾನು ಹೇಳುವ ತತ್ತ್ವಗಳನ್ನೆಲ್ಲ ಹುಡುಗರು ಅರ್ಥಮಾಡಿಕೊಳ್ಳುತ್ತಿದ್ದಾರೆಯೇ, ಇಲ್ಲವೆ? ಪರೀಕ್ಷೆ ಮಾಡಬೇಕಲ್ಲ. ಎಲ್ಲರನ್ನೂ ಬಳಿಗೆ ಕರೆದರು ಗುರುಗಳು. ಎಲ್ಲರಿಗೂ ಒಂದೊಂದು ಬಾಳೆಯ ಹಣ್ಣನ್ನು ಕೊಟ್ಟು, ''ಹೋಗಿ, ಯಾರೂ ಇಲ್ಲದಲ್ಲಿ ತಿಂದು ಬನ್ನಿ'' ಎಂದರು. ಸರಿ, ಗುರುಗಳು ಕೊಟ್ಟ ಹಣ್ಣನ್ನು ಎಲ್ಲರೂ ತೆಗೆದುಕೊಂಡು ಹೋದರು. ಮಧ್ಯಾಹ್ನದ ನಂತರ ಎಲ್ಲರೂ ಪಾಠಕ್ಕೆ ಸೇರಿದಾಗ ಗುರುಗಳು ಕೇಳಿದರು, ''ನಾನು ಕೊಟ್ಟ ಬಾಳೆಯ ಹಣ್ಣನ್ನು ಎಲ್ಲರೂ ತಿಂದಿರಾ?''

''ಹೌದು, ತಿಂದೆವು ಗುರುಗಳೇ.''

''ಎಲ್ಲಿ ತಿಂದಿರಿ, ಹೇಗೆ ತಿಂದಿರಿ – ಹೇಳಿ.''

''ನೀವು ಹೇಳಿದ ಹಾಗೆ, ಯಾರೂ ಇಲ್ಲದಲ್ಲಿ, ಯಾರಿಗೂ ಕಾಣದಂತೆ ತಿಂದೆವು'' ಎಂದರು ಶಿಷ್ಯಂದಿರು.

ಒಬ್ಬೊಬ್ಬ ಒಂದೊಂದು ಕಡೆ, ನಿರ್ಜನವಾದ ಸ್ಥಳದಲ್ಲಿ, ಕೋಣೆಯ ಅಗಳಿ ಹಾಕಿಕೊಂಡು, ಕಾಡಿಗೆ ಹೋಗಿ, ನದೀ ತೀರದಲ್ಲಿ... ಹೀಗೆ ತಾವು ಮಾಡಿದ ಉಪಾಯವನ್ನು ಹೇಳಿಕೊಂಡರು. ಒಬ್ಬ ಹುಡುಗ ಮಾತ್ರ ಸುಮ್ಮನಿದ್ದ. ಕೈಯಲ್ಲಿ ಇನ್ನೂ ಬಾಳೆಯ ಹಣ್ಣು ಹಾಗೆಯೇ ಇತ್ತು. ''ಯಾಕಪ್ಪಾ, ಕನಕ, ನೀನು ಬಾಳೆಯ ಹಣ್ಣನ್ನು ತಿಂದೇ ಇಲ್ಲವಲ್ಲ?'' ಎಲ್ಲ ಹುಡುಗರೂ ಅವನ ಪೆದ್ದುತನವನ್ನು ಕಂಡು ನಕ್ಕರು. ಗುರುಗಳ ಪ್ರಶ್ನೆಗೆ ಏನು ಉತ್ತರ ಕೊಡುತ್ತಾನೋ ಎಂದು ಎಲ್ಲರೂ ಅವನತ್ತಲೇ ನೋಡುತ್ತಿದ್ದರು. ಕನಕ ಹೇಳಿದ, ''ಗುರುಗಳೇ, ಕ್ಷಮಿಸಿ. ಹಣ್ಣನ್ನು ತಿನ್ನಲಾಗಲಿಲ್ಲ. ಬೆಳಿಗ್ಗೆ ನೀವೇ ಹೇಳಿಕೊಟ್ಟಿದ್ದಿರಿ, ದೇವರು ಇಲ್ಲದ ಸ್ಥಳವೇ ಇಲ್ಲ. ಅವನು ಸರ್ವಾಂತರ್ಯಾಮಿ ಅಂತ. ಹಾಗಿದ್ದ ಮೇಲೆ, ನಾನು ಎಲ್ಲಿ ಅಡಗಿ ನಿಂತು ತಿಂದರೂ ಅದು ಅವನಿಗೆ ಕಾಣಿಸುವುದಿಲ್ಲವೆ? ಆದ್ದರಿಂದ ತಿನ್ನಲಿಲ್ಲ...'' ಎಂದು. ಎಲ್ಲ ಹುಡುಗರೂ ಪೆಚ್ಚಾಗಿ ಅವನನ್ನೇ ದಿಟ್ಟಿಸುತ್ತಿದ್ದರು. ಗುರುಗಳು ಹೇಳಿದರು, ''ಭೇಷ್ ಕನಕ! ನಿನಗೊಬ್ಬನಿಗೆ ಮಾತ್ರ ನಾನು ದೇವರ ಬಗ್ಗೆ ಹೇಳಿಕೊಟ್ಟ ತತ್ತ್ವ ಅರ್ಥವಾಗಿದೆ. ಉಳಿದವರಿಗೆ ಸ್ವಲ್ಪವೂ ಒಳಗೆ ಇಳಿದಿಲ್ಲ.''

ಕನಕದಾಸರ ಈ ಪ್ರಸಿದ್ಧ ಕಥೆ ಯಾರಿಗೆ ಗೊತ್ತಿಲ್ಲ? ಆದರೆ ಎಷ್ಟು ಸಲ ಹೇಳಿದರೂ ಇದರ ಸ್ವಾರಸ್ಯ ಕಡಿಮೆಯಾಗುವುದೇ ಇಲ್ಲ. ಹತ್ತು ಜನರಿಗೆ ಕಾಣಿಸದಿದ್ದ ಸತ್ಯ ಒಬ್ಬನಿಗೆ ಮಾತ್ರ ಕಂಡಿತು. ಮುಂದೆ ದೊಡ್ಡ ಸಂತನಾಗುವ ಎಲ್ಲ ಲಕ್ಷಣ ಅವನಲ್ಲಿ ಕಂಡು ಬಂತು.

ನಾವು ಜೀವನದಲ್ಲಿ ಈ ರೀತಿ ಆಳವಾದ ತತ್ತ್ವವನ್ನು ಕಂಡುಕೊಳ್ಳಬಲ್ಲ ಕೆಲವೇ ವ್ಯಕ್ತಿಗಳನ್ನು ಮಾತ್ರ ನೋಡುತ್ತೇವೆ. ಇತರರಿಗೆ ಅರ್ಥವಾಗದು ಎಂದು ಹೇಳಲಾಗದು; ಆದರೆ ಅದನ್ನು ಅವರೇ ಕಂಡುಕೊಳ್ಳಲಾರರು; ಬೇರೆಯವರು ಬಿಡಿಸಿ ಹೇಳಿದರೆ ಮಾತ್ರ ಅವರಿಗೆ ಅರ್ಥವಾಗುವುದು. ಕೇವಲ ಆಧ್ಯಾತ್ಮಿಕ ವಿಚಾರವಷ್ಟೇ ಇಲ್ಲ; ವಿಜ್ಞಾನ, ಗಣಿತ, ವ್ಯಾಕರಣ, ಕಂಪ್ಯೂಟರ್ ವಿಜ್ಞಾನ – ಇತ್ಯಾದಿ ಎಲ್ಲ ಜ್ಞಾನಶಾಖೆಗಳಲ್ಲೂ ಹೀಗೆ ಕೆಲವರು ಅಂತರಂಗದಲ್ಲಿ ಅರ್ಥವನ್ನು ಕಂಡುಕೊಳ್ಳಬಲ್ಲವರಿದ್ದಾರೆ. ಅದನ್ನು ಅವರು ಮಾತ್ರ ಕಾಣುತ್ತಾರೆ. ಇದೇಕೆ ಹೀಗೆ ಎಂದು ವಿವರಿಸಲಾಗದು. ಮಾನವನ ಮನಸ್ಸಿನ ಆಳದಲ್ಲಿ ಅದೆಷ್ಟು ಪದರಗಳಿವೆಯೋ, ಅದೆಷ್ಟು ಹೊರಬರದ ನಿಗೂಢ ಅಚ್ಚರಿಗಳಿವೆಯೋ, ಯಾರು ಹೇಳಬಲ್ಲರು? ಯಾವುದೋ ಒಂದು ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಮಾನವನ ಇತಿಹಾಸವನ್ನೇ ಬದಲಾಯಿಸಬಲ್ಲ ಸತ್ಯವನ್ನು ಕಂಡುಕೊಂಡಾಗ ಎಲ್ಲರೂ ಅಚ್ಚರಿಗೊಳ್ಳುತ್ತಾರೆ. ''ಅವನ ಮೇಧಾಶಕ್ತಿ ಅಸಾಧಾರಣ'' ಎನ್ನುತ್ತಾರೆ.

## ಮಾನವ ಇತಿಹಾಸದಲ್ಲಿ

ನಮ್ಮ ಇತಿಹಾಸದುದ್ದಕ್ಕೂ ಇಂತಹ ಹಲವಾರು ಘಟನೆಗಳು ದಾಖಲಾಗಿವೆ. ಅಂಥ ಕೆಲವು ಘಟನೆಗಳೊಂದಿಗೆ ಕೆಲವು ವ್ಯಕ್ತಿಗಳೂ ಗುರುತಿಸಲ್ಪಟ್ಟಿದ್ದಾರೆ. ಒಬ್ಬ ಆರ್ಕಿಮಿಡಿಸ್, ಒಬ್ಬ ನ್ಯೂಟನ್, ಮೊಝಾರ್ಟ್, ಶ್ರೀನಿವಾಸ ರಾಮಾನುಜನ್ ಮಂತಾದವರೆಲ್ಲ ಮನುಕುಲದ ಚರಿತ್ರೆಯಲ್ಲಿ ಅಪರೂಪವಾಗಿ ಹುಟ್ಟಿಬಂದವರು.

ಆದರೆ ಮಾನವನು ಅಗ್ನಿಯ ಬಳಕೆಯನ್ನು ಅರಿತಾಗ, ಉಪಕರಣಗಳನ್ನು ಬಳಸಲು ಆರಂಭಿಸಿದಾಗ, ಚಕ್ರವನ್ನು ಕಂಡುಹಿಡಿದಾಗ ಯಾವ ವ್ಯಕ್ತಿಯೂ ತನ್ನ ಕುರುಹನ್ನು ಬಿಟ್ಟುಹೋಗಲಿಲ್ಲ. ಆದರೆ ಅವರೆಲ್ಲ ಕಂಡುಕೊಂಡ ಅರಿವು ಇಡೀ ಮನುಕುಲದ ಸೊತ್ತಾಯಿತು. ಇನ್ನು ಭಾರತಕ್ಕೆ ಬಂದರೆ, ವೇದ-ಉಪನಿಷತ್ತುಗಳಲ್ಲಿ ಈ ಬಗೆಯ ಸಂಶೋಧನೆಗಳೇ ಇಡಿಕಿರಿದಿವೆ. ಆದರೆ ಇವು ಬಾಹ್ಯ ಜಗತ್ತಿನ ಬಗೆಗಲ್ಲ; ನಮ್ಮ ಆಂತರಿಕ ಜಗತ್ತಿನ ಬಗೆಗೆ. ಆಧ್ಯಾತ್ಮಿಕ ರಹಸ್ಯಗಳೆಲ್ಲ ಇಲ್ಲಿ ಹಲವು ಬಗೆಯಲ್ಲಿ ದಾಖಲುಗೊಂಡಿವೆ. ವಿಶ್ವಾಮಿತ್ರ, ನಚಿಕೇತ, ಸತ್ಯಕಾಮ, ಯಾಜ್ಞವಲ್ಕ್ಯರಂತಹ ಋಷಿಗಳ ಕೆಲವು ಉಲ್ಲೇಖಗಳನ್ನು ಬಿಟ್ಟರೆ, ಸಹಸ್ರಾರು ವರ್ಷಗಳ ಹಿಂದೆ ದೀರ್ಘಕಾಲ ಧ್ಯಾನದಲ್ಲಿ ಮುಳುಗಿ, ಅಗೋಚರ ಸತ್ಯಗಳನ್ನು ಕಂಡುಕೊಂಡ ಪ್ರಾಚೀನ ಮಹಾತ್ಮರ ವಿವರಗಳನ್ನು ನಾವೆಲ್ಲಿಯೂ ಕಾಣಲಾರೆವು. ಪುರಾಣಗಳಲ್ಲಿ ಕಂಡುಬರುವ ಹಲವು ಕಥೆಗಳಲ್ಲಿ ಕೆಲವು ಮಹಾತ್ಮರ ಕಥೆಗಳಷ್ಟೇ ಕಂಡುಬರುತ್ತವೆ. ನಮ್ಮ ಸಂಸ್ಕೃತಿಯಲ್ಲಿ ಇಂಥ ಮೇಧಾವಿ ವ್ಯಕ್ತಿಗಳು ಮುಖ್ಯವಲ್ಲ; ಅವರು ಕಂಡ ಸತ್ಯಗಳು ಮುಖ್ಯ. ಅದರೊಂದಿಗೆ ಸಂಬಂಧಿಸಿದ ವ್ಯಕ್ತಿಗಳ ಸ್ಫೂರ್ತಿದಾಯಕ ಜೀವನ ಮಾತ್ರ ಒಂದಲ್ಲ ಒಂದು ರೀತಿ ನಮ್ಮ ಸಮಾಜವನ್ನು ನಿರಂತರ ಸ್ಫೂರ್ತಿಗೊಳಿಸುತ್ತಾ ಹೋಗುತ್ತದೆ.

ಇದೇ ರೀತಿಯ ಉದಾಹರಣೆ ಸ್ವಾಮಿ ವಿವೇಕಾನಂದರ ಜೀವನದಲ್ಲೂ ಬರುತ್ತದೆ. ಈ ವಿಚಾರವನ್ನು ಸ್ವಾಮಿ ಶಾರದಾನಂದರು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಹೀಗೆ ವಿವರಿಸುತ್ತಾರೆ: ''ನರೇಂದ್ರನಲ್ಲದೆ ಮತ್ತಾರಿಗೂ ಶ್ರೀರಾಮಕೃಷ್ಣರ ಮಾತುಗಳ ಮತ್ತು ಅಲೌಕಿಕ ಗೂಢಾರ್ಥವನ್ನು ಅರ್ಥ ಮಾಡಿಕೊಂಡು ಅವುಗಳಿಗೆ ವ್ಯಾಖ್ಯಾನ ನೀಡುವ ಸಾಮರ್ಥ್ಯ ಇರಲಿಲ್ಲ. ಆ ಸಂದರ್ಭದಲ್ಲಿಯೇ ನರೇಂದ್ರನ ಮೂಲಕ ಶ್ರೀರಾಮಕೃಷ್ಣರ ಮಾತುಗಳನ್ನು ಕೇಳಿ ನಮಗೆ ಅತ್ಯಾಶ್ಚರ್ಯವಾಗುತ್ತಿತ್ತು. ನಾವು ಭಾವಿಸುತ್ತಿದ್ದೆವು: 'ಹಾ! ನಾವೂ ಕೂಡ ಶ್ರೀರಾಮಕೃಷ್ಣರಿಂದ ಈ ಮಾತುಗಳನ್ನು ಕೇಳಿದ್ದೇವೆ. ಆದರೆ ಅವುಗಳಿಗೆ ಇಷ್ಟೊಂದು ಆಳವಾದ ಅರ್ಥವಿದೆ ಎಂಬುದು ತಿಳಿಯಲೇ ಇಲ್ಲವಲ್ಲ.' ''

*(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು. ೩೭೮)*

ಭಕ್ತರೊಡನೆ ಮಾತನಾಡುತ್ತಿದ್ದ ಶ್ರೀರಾಮಕೃಷ್ಣರು ವೈಷ್ಣವ ಧರ್ಮವನ್ನು ವಿವರಿಸುತ್ತ, ಅದು ನಾಮದಲ್ಲಿ ರುಚಿ, ಜೀವಿಗಳಿಗೆ ದಯೆ ಮತ್ತು ವೈಷ್ಣವರ (ಭಕ್ತರ) ಪೂಜೆ - ಇವನ್ನು ಯಾವಾಗಲೂ ಪಾಲಿಸಬೇಕೆಂದು ಹೇಳುತ್ತದೆ - ಎಂದರು. ಇದ್ದಕ್ಕಿದ್ದಂತೆ ಸಮಾಧಿಸ್ಥರಾಗಿ, ಅರ್ಧಬಾಹ್ಯದೆಶೆಗೆ ಬಂದ ಅವರು, ''ಜೀವಿಗಳ ಮೇಲೆ ದಯೆ ತೋರಿಸುವುದೆ? ಜೀವಿಗಳ ಮೇಲೆ ದಯೆ ತೋರಿಸುವೆಯಾ? ದಯೆ ತೋರಿಸುವುದಕ್ಕೆ ನೀನಾರು? ಇಲ್ಲ, ಇಲ್ಲ, ಜೀವಿಗಳ ಮೇಲೆ ದಯೆ ಅಲ್ಲ - ಶಿವಜ್ಞಾನದಲ್ಲಿ ಜೀವರ ಸೇವೆ!'' ಎಂದರು. ಈ ಮಾತಿನ ಅಂತರಾರ್ಥವನ್ನು ಕೂಡಲೇ ಅರಿತುಕೊಂಡ ಸ್ವಾಮೀಜಿ, ಉಳಿದವರ ಮುಂದೆ ಅದನ್ನು ಅತ್ಯದ್ಭುತವಾಗಿ ವಿವರಿಸಿದರು. ''ತೀಕ್ಷ್ಣಬುದ್ಧಿಯವನಾದ ನರೇಂದ್ರನಾಥನು ಮಾತ್ರ ಈ ಎಲ್ಲ ದಿವ್ಯವಾಣಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಮಗೆ ಆಗಾಗ ವಿವರಿಸಿ ಹೇಳುತ್ತಾ ನಮ್ಮನ್ನು ಚಕಿತಗೊಳಿಸುತ್ತಿದ್ದನು'' ಎಂದು ಸ್ವಾಮಿ ಶಾರದಾನಂದರು ಬರೆಯುತ್ತಾರೆ. *(ಅಲ್ಲೇ, ಪು. ೩೮೧)*

ಮಾನವನ ಇತಿಹಾಸದಲ್ಲಿ ಬೌದ್ಧಿಕ ವಿಕಾಸಕ್ಕೆ ಮಹತ್ವದ ಸ್ಥಾನವಿದೆ. ಎಲ್ಲ ಜ್ಞಾನದ ಬೆಳವಣಿಗೆ, ವಿಜ್ಞಾನ-ತಂತ್ರಜ್ಞಾನಗಳ ಆವಿಷ್ಕಾರ, ತತ್ತ್ವ-ಸಿದ್ಧಾಂತಗಳ ಸಂಪ್ರದಾಯ - ಇವೆಲ್ಲ ಬೌದ್ಧಿಕ ವಿಕಾಸದಿಂದಲೇ ಬೆಳೆದುಬಂದವು. ಬೌದ್ಧಿಕ ವಿಕಾಸವಿಲ್ಲದ ಮಾನವನ ಪ್ರಾಣಿಜೀವನ ರೀತಿಯನ್ನು ನಾವು ಇಂದು ಊಹಿಸುವುದೂ ಕಷ್ಟ. ಆದರೆ ಮಾನವನ ಬೌದ್ಧಿಕ ಮಟ್ಟದಲ್ಲೂ ಏಕರೂಪತೆಯಿಲ್ಲ; ಒಂದೇ ಬಗೆಯ ಬೆಳವಣಿಗೆಯಿಲ್ಲ. ವಿವಿಧ ಹಂತಗಳ, ವಿವಿಧ ನೆಲೆಗಳ ಬೌದ್ಧಿಕ ವಿಕಾಸವು ಮಾನವನ ವೈವಿಧ್ಯಮಯ ಜೀವನಶೈಲಿಗಳಲ್ಲಿ ಕಂಡುಬರುತ್ತದೆ. ಇಷ್ಟೊಂದು ಭಿನ್ನತೆ, ವೈವಿಧ್ಯತೆಗಳಿದ್ದರೂ ಈ ಹಿಂದೆ ಹೇಳಿದ ವಿಶೇಷ ಬೌದ್ಧಿಕ ದೃಷ್ಟಿಕೋನ ಕೆಲವರಲ್ಲಿ ಮಾತ್ರ ಇರುತ್ತದೆ ಎಂಬುದನ್ನು ಸಮಾಜ ಕಂಡುಕೊಳ್ಳುತ್ತದೆ. ಅಂತಹವರು ಜೀವನದಲ್ಲಿ ಯಾವ ಸ್ಥಾನ, ಪದವಿ ಅಥವಾ ಕೀರ್ತಿ, ಪ್ರಸಿದ್ಧಿಯನ್ನು ಗಳಿಸಲಿ, ಬಿಡಲಿ - ಅವರು ಸಮಾಜದ ಮೇಲೆ ಗಾಢ ಪ್ರಭಾವವನ್ನು ಬೀರಿ ಹೋಗುತ್ತಾರೆ. ಅವರ ಪ್ರಭಾವ ಸಾಮಾನ್ಯರ ಮೇಲೆ ಯಾವ ರೀತಿಯಲ್ಲೇ ಆದರೂ, ಕೆಲವೇ ಕೆಲವರ ಮೇಲೆ ಅದು ವಿಶೇಷವಾಗಿ ಉಂಟಾಗುತ್ತದೆ. ಹೀಗೆ ಅವರ ಬೌದ್ಧಿಕತೆ, ಚಿಂತನೆ ಇತರರ ಮೂಲಕ ವಿಸ್ತಾರವಾಗುತ್ತಾ ಹೋಗುತ್ತದೆ. ವ್ಯಕ್ತಿ ಅಳಿಯುತ್ತಾನೆ; ಆದರೆ ಅವನ ತತ್ತ್ವ ಸಾಯುವುದಿಲ್ಲ.

### ಬಂದು ಸೇರುವ ನೆಲೆ

ಒಬ್ಬೊಬ್ಬ ಮಹಿಮಾನ್ವಿತ ಚಿಂತಕನೂ ತಮ್ಮ ಜೀವನದಲ್ಲಿ ಕಂಡುಕೊಂಡ ಸತ್ಯಗಳಿಗೆ ಅನುಸಾರವಾಗಿ, ಅವರು ಬಂದು ಸೇರುವ ನೆಲೆ ಕೂಡ ಒಂದೊಂದು ಬಗೆಯದು. ಕೆಲವರು ಐಹಿಕವಾದ, ಪ್ರಾಪಂಚಿಕವಾದ ಜೀವನದಲ್ಲಿ ವಿಶೇಷ ಅರಿವನ್ನು ಕಂಡುಕೊಂಡು, ತಮ್ಮ ಬದುಕಿನ ಧ್ಯೇಯವನ್ನು ಅದಕ್ಕೆ ತಕ್ಕಂತೆ ಮಾಡಿಕೊಳ್ಳುತ್ತಾರೆ. ಈ ಮೂಲಕ ಸಮಾಜದ ಐಹಿಕ ಬದುಕಿನಲ್ಲಿ ಗಾಢವಾದ ಪ್ರಭಾವ ಬೀರುತ್ತಾರೆ. ವಿಜ್ಞಾನಿಗಳು, ಶಾಸ್ತ್ರಜ್ಞರು, ಚಿಂತಕರು, ಸಾಹಿತಿಗಳು, ಈ ಪಂಗಡದವರು. ಇನ್ನು ತತ್ತ್ವಶಾಸ್ತ್ರ, ಅಧ್ಯಾತ್ಮ, ಧರ್ಮ, ಇವುಗಳ ವಿಚಾರವಾಗಿ ವಿಶೇಷವಾಗಿ ಚಿಂತನ-ಮಂಥನ ನಡೆಸುತ್ತ ಹೊಸ ವಿಚಾರಗಳನ್ನು ಕಂಡುಕೊಳ್ಳುವವರು ಆಂತರಿಕ ಅನ್ವೇಷಣೆಯಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸುತ್ತಾರೆ. ಇದೇ ರೀತಿ ಹಲವರ ದಾರಿ ಬೇರೆ, ದಿಕ್ಕು ಬೇರೆ, ಅವರು ಕಾಣುವ ಸತ್ಯವೂ ಬೇರೆ. ಒಂದೇ ಸತ್ಯವನ್ನು ಹಲವರು ಹಲವು ರೀತಿ ಕಾಣಬಹುದು; ಆದರೆ ಅದೇ ಪೂರ್ಣ ಸತ್ಯ ಎನ್ನಲಾಗದು.

ಕೇವಲ ಅನುಭಾವಿಗಳು, ಸಾಕ್ಷಾತ್ಕಾರ ಹೊಂದಿದ ಮಹಾತ್ಮರು ಮಾತ್ರ ತಾವು ಅಂತಿಮ ಸತ್ಯವನ್ನು ಕಂಡಿದ್ದೇವೆ ಎನ್ನುತ್ತಾರೆ. ಸಾಮಾನ್ಯ ನೆಲೆಯನ್ನು ದಾಟಿ, ಇಂದ್ರಿಯಾತೀತ ಜಗತ್ತನ್ನು ಪ್ರವೇಶಿಸಬೇಕು – ಆಗ ಮಾತ್ರ ಸತ್ಯವು ಅವನಿಗೆ ಕಾಣಿಸಿಕೊಳ್ಳುತ್ತದೆ ಎಂದು ವೇದಾಂತ ಹೇಳುತ್ತದೆ. ಒಟ್ಟಿನಲ್ಲಿ , ಆಳಕ್ಕೆ ಇಳಿದಲ್ಲದೆ ಸತ್ಯ ಕಾಣಿಸಲಾರದು. ಇದನ್ನೇ ಶ್ರೀರಾಮಕೃಷ್ಣರು 'ಮುಳುಗು ಮನವೇ, ಮುಳುಗು ಕಡಲಾಳಕೆ' ಎಂಬ ಹಾಡನ್ನು ಹಾಡುತ್ತ ಸೂಚಿಸುತ್ತಿದ್ದರು.

### ಅನ್ವೇಷಣೆ–ಅತಿ ಪ್ರಾಚೀನ

ಯೂರೋಪ್‌ನಲ್ಲಿ ೧೫–೧೬ನೇ ಶತಮಾನದಲ್ಲಿ ಉಂಟಾದ ವೈಚಾರಿಕ ಕ್ರಾಂತಿ, ಪುನರುಜ್ಜೀವನಗಳ ಕಾರಣದಿಂದ ವಿಜ್ಞಾನ, ತಂತ್ರಜ್ಞಾನ, ನೂತನ ವಿಚಾರಧಾರೆ ಇವು ಅತಿ ವೇಗವಾಗಿ ವಿಕಾಸ ಹೊಂದಿದವು. ಇಡೀ ಪ್ರಪಂಚವೇ ಹೊಸ ಜ್ಞಾನದಿಂದ ಆಧುನಿಕ ದೃಷ್ಟಿಕೋನವನ್ನು ಹೊಂದುವಂತಾಯಿತು. ಯುಗಯುಗಗಳಿಂದ ಮನೆಮಾಡಿದ್ದ ಅಂಧಕಾರ, ಕಂದಾಚಾರ, ಕುರುಡು ನಂಬಿಕೆಗಳಿಗೆ ಶಾಶ್ವತವಾದ ವಿನಾಶವುಂಟಾಯಿತು. ಆದರೆ ಹೊಸ ವೈಜ್ಞಾನಿಕ ಕ್ರಾಂತಿಯ ಪ್ರಭಾವವು ಭಾರತದ ಮೇಲಾದುದು ಬೇರೆ ರೀತಿಯಲ್ಲಿ. ಸ್ವಾತಂತ್ರ್ಯದ ಬಯಕೆ, ರಾಷ್ಟ್ರೀಯತೆಯ ಕಲ್ಪನೆ ಹಾಗೂ ಆಧುನಿಕತೆಯ ಹುಮ್ಮಸ್ಸಿನೊಂದಿಗೆ ನವಭಾರತದ ತರುಣರು ನಮ್ಮ ಸಂಸ್ಕೃತಿಯ ಮಹತ್ವವನ್ನು ಕಂಡುಕೊಳ್ಳುವುದಕ್ಕೂ ಮುಂದಾದರು. ಇದರ ಪರಿಣಾಮವಾಗಿ ಭಾರತದ ಪುನರುಜ್ಜೀವನ ಹೊಸ ರೀತಿಯಲ್ಲಾಯಿತು. ಯೂರೋಪಿನಲ್ಲಿ ನಡೆದಂತೆ ಪ್ರಾಚೀನ ಸತ್ಯ, ವಿಚಾರಗಳೆಲ್ಲ ಸುಳ್ಳು ಹಾಗೂ ನಿರುಪಯುಕ್ತ ಎಂಬ ಮನೋಭಾವ ಇಲ್ಲಿ ಬೆಳೆಯದೆ, ಆಧುನಿಕ ವೈಜ್ಞಾನಿಕ ದೃಷ್ಟಿಯಲ್ಲೂ ನಮ್ಮ ಪರಂಪರೆಯ ಧರ್ಮ–ಅಧ್ಯಾತ್ಮಗಳನ್ನು ಪರೀಕ್ಷಿಸಿ ಕಾಣುವ ದೃಷ್ಟಿಕೋನ ಹುಟ್ಟಿಕೊಂಡಿತು. ಈ ಮೂಲಕ ನಮ್ಮ ಸನಾತನ ಧರ್ಮದ ಭದ್ರ ಅಡಿಪಾಯವು ವಿಜ್ಞಾನ–ಆಧುನಿಕತೆಗಳ ಅಗ್ನಿಪರೀಕ್ಷೆಯನ್ನೂ ಮೆಟ್ಟಿ ನಿಲ್ಲಲು ಸಮರ್ಥವಾಯಿತು.

ಪಾಶ್ಚಾತ್ಯರ ವೈಜ್ಞಾನಿಕ ದೃಷ್ಟಿ ಕೇವಲ ಭೌತಿಕ ಪ್ರಪಂಚಕ್ಕೆ ಸೇರಿದ್ದು; ಆದರೆ ನಮ್ಮ ಪರಂಪರೆಯ ಧರ್ಮ, ದರ್ಶನ, ಅಧ್ಯಾತ್ಮ ಇವು ಆಂತರಿಕ ಜಗತ್ತಿಗೆ ಸೇರಿದ್ದು ಎಂಬ ಅಂಶ ಇಲ್ಲಿ ಬಹಳ ಮುಖ್ಯವಾಗುತ್ತದೆ. ವಿಜ್ಞಾನದ ದೃಷ್ಟಿಯಿಂದ ನಮ್ಮ ಆಂತರಿಕ ಜಗತ್ತನ್ನು ಅಳೆಯಲಾಗದು; ಏಕೆಂದರೆ ಅದು ಅನುಭವದ ಆಧಾರದಿಂದ ಮಾತ್ರ ಪ್ರಮಾಣವಾಗತಕ್ಕದ್ದು. ಪಂಚೇಂದ್ರಿಯಗಳು ಹಾಗೂ ಮನಸ್ಸು–ಬುದ್ಧಿಗಳನ್ನು ಮೀರಿದ ಅಲೌಕಿಕ ತತ್ತ್ವಗಳನ್ನು, ಕೇವಲ ಇಂದ್ರಿಯ–ಮನಸ್ಸು–ಬುದ್ಧಿಗಳನ್ನು ಹಾಗೂ ಭೌತಿಕ ಪ್ರಯೋಗಗಳನ್ನು ಅವಲಂಬಿಸುವ ವಿಜ್ಞಾನವು ಹೇಗೆ ಅಳೆಯಬಲ್ಲುದು? ಎರಡೂ ಬೇರೆ ಬೇರೆ ದಿಕ್ಕಿನ ಮಾರ್ಗಗಳಾಗಿವೆ. ಈ ಭಿನ್ನತೆಯನ್ನು ಉಪನಿಷತ್ತುಗಳ ಕಾಲದಿಂದಲೇ ನಮ್ಮ ಪೂರ್ವಜರು ಸ್ಪಷ್ಟವಾಗಿ ಅರಿತಿದ್ದರು. ಆದ್ದರಿಂದ, ಭಾರತೀಯರು ಬೌದ್ಧಿಕ ದೃಷ್ಟಿಕೋನದ ಮಿತಿಯನ್ನು ಮೊದಲೇ ಅರಿತುಕೊಂಡಿದ್ದರಿಂದಲೇ ಅವರು ಆಂತರಿಕ ಅನ್ವೇಷಣೆಯಲ್ಲಿ ಅಷ್ಟೊಂದು ಮುಂದುವರಿಯುವುದು ಸಾಧ್ಯವಾಯಿತು.

### ಭಾರತ ಕಂಡ ಜೀವನ ಸತ್ಯಗಳು

ನಮ್ಮ ಪೂರ್ವಜರು ಅರಸಿದ್ದು ಬಂದು ಹೋಗುವ, ಇದ್ದು ಮರೆಯಾಗುವ ಈ ಪ್ರಪಂಚದ ಸತ್ಯಗಳನ್ನಲ್ಲ. ಭೌತಿಕ ಜಗತ್ತಿನ ಅನ್ವೇಷಣೆಯನ್ನು ಅವರೂ ಮಾಡಿದ್ದರು; ಅದರ ಹಿಂದಿನ ರಹಸ್ಯವನ್ನೂ ಅವರು ಅರಸಿದ್ದರು – ನಿಜ. ವೇದಗಳಲ್ಲಿ ಈ ಕುರಿತ ವಿವರಣೆಗಳಿವೆ. ಆದರೆ ಅವರ ದೃಷ್ಟಿ ಮುಂದುವರಿದದ್ದು ಶಾಶ್ವತ ಸತ್ಯದ ಕಡೆಗೆ. ಎಂದೂ ಬದಲಾಗದ, ಅನಂತವಾದ, ನಿತ್ಯವೂ ಪರಿಶುದ್ಧವೂ ಆದ ಆತ್ಮತತ್ತ್ವವನ್ನು ಕಂಡುಕೊಳ್ಳುವ ಮೂಲಕ ಅವರ ಅನ್ವೇಷಣೆ ಫಲದಾಯಕವಾಯಿತು. 'ಯಾವ ಅರಿವನ್ನು ಪಡೆದರೆ ಎಲ್ಲವನ್ನೂ ಅರಿತಂತಾಗುವುದೋ', ಅದೇ ನಿಜವಾದ ಅರಿವು – ಇದು ಜ್ಞಾನಕ್ಕೆ ಸಂಬಂಧಿಸಿದಂತೆ ಕೊನೆಯ ಮಾತು. ಇದನ್ನು ಅರಿಯಲು ಯಾವುದೇ ವಿಶ್ವವಿದ್ಯಾಲಯದ ಕೋರ್ಸುಗಳಿಲ್ಲ, ಯಾವುದೇ ಪದವಿಗಳಿಲ್ಲ. ಈ ಸತ್ಯವನ್ನು ಅರಸುವವನು ತನ್ನ ಇಡೀ ಜೀವನವನ್ನೇ ಸಮರ್ಪಿಸಿ, ಸತ್ಯವನ್ನರಸಬೇಕು. ಅದಕ್ಕಾಗಿ ಅವನು ಯಾವುದೇ ತ್ಯಾಗವನ್ನಾದರೂ ಮಾಡಬೇಕು. ಏಕೆಂದರೆ, ಇದರಿಂದ ಅವನು ಗಳಿಸುವುದು ಅಂತಿಂತಹ ಲಾಭವಲ್ಲ; ಎಂದಿಗೂ ಅಳಿಸಿಹೋಗದ, ಹುಟ್ಟು–ಸಾವುಗಳನ್ನು ಮೀರಿದ, ವ್ಯಕ್ತ ಪ್ರಪಂಚವನ್ನೆಲ್ಲ ದಾಟಿದ ಸಂಪತ್ತು. ಈ ಮಾರ್ಗದಲ್ಲಿ ನಡೆದ ಎಲ್ಲರೂ ಗುರಿ ತಲುಪಲಾರರು; ಆದರೂ ಅಂತಹ ಅಮೃತತ್ವವನ್ನು ಹೊಂದಿದ ಕೆಲವೇ ಮಹಾತ್ಮರೇ ಎಲ್ಲರ ಆದರ್ಶ. ಇಂದಲ್ಲ ನಾಳೆ, ಈ ಜನ್ಮದಲ್ಲಿ ಆಗದಿದ್ದರೆ ಮುಂದಿನ ಜನ್ಮಗಳಲ್ಲಿ — ನಾವೆಲ್ಲ ಆ ಗುರಿಯನ್ನು ತಲುಪಲೇಬೇಕು. ಇಂತಹ ಆಧ್ಯಾತ್ಮಿಕ ಆದರ್ಶವನ್ನು ನಮ್ಮ ಪೂರ್ವಜರು ಹಾಕಿಕೊಟ್ಟಿದ್ದಾರೆ. ಸತ್ಯವನ್ನು ಕಂಡವರು ಕೆಲವೇ ಮಂದಿ; ಆದರೆ ಅವರು ಹೇಳುತ್ತಾರೆ –'ನಾನು ಸತ್ಯವನ್ನು ಕಂಡಿದ್ದೇನೆ. ಅದನ್ನು ನೀವೂ ಕಾಣಬಹುದು. ಅದನ್ನು ಕಂಡರೆ ಮಾತ್ರ ನಿಮ್ಮ ಜೀವನ ಸಾರ್ಥಕ.' ನಿಜ, ಇಂತಹ ಜೀವನ ಸತ್ಯವನ್ನು ನಮ್ಮ ಹಿಂದಿನವರು ಕಂಡಿದ್ದರು; ಅದೇ ನಮ್ಮ ಪರಂಪರೆಯ ಸಂಪತ್ತು , ನಮ್ಮ ಸಂಸ್ಕೃತಿಯ ಶ್ರೇಷ್ಠತೆ. ಅದನ್ನು ಸ್ಪಷ್ಟವಾಗಿ ಅರಿತು ಆ ಮಾರ್ಗದಲ್ಲಿ ನಾವೂ ನಡೆಯಬೇಕು. ಆಗ ಮಾತ್ರ ನಮ್ಮ ಬದುಕು ಧನ್ಯತೆಯನ್ನು ಕಾಣಬಹುದು. ✿

**ಜೂನ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೧೪ | ಬುಧವಾರ | ಏಕಾದಶಿ |
| ೨೯ | ಗುರುವಾರ | ಏಕಾದಶಿ |